**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,</u>**
**<u>ಉಡುಪಿ ಜಿಲ್ಲೆ , ಉಡುಪಿ</u>**

<u>ಸ್ಪೆಷಲ್ ಕೇಸ್ ನಂಃ 54/2022</u> <u>ಪಿ.ಡಬ್ಲ್ಯೂಃ 10</u>

<u>ಸಿ.ಡಬ್ಲ್ಯೂಃ 13</u>

| | |
|---|---|
| ಸಾಕ್ಷಿದಾರರ ಹೆಸರು | ಗಣೇಶ ಮೂಲ್ಯ |
| ತಂದೆಯ ಹೆಸರು | ಸೋಮಯ್ಯ ಮೂಲ್ಯ |
| ವಯಸ್ಸು | 44 ವರ್ಷ |
| ಉದ್ಯೋಗ | ವ್ಯಾಪಾರ |
| ವಿಳಾಸ | ಎಲ್ಲೂರು, ಉಡುಪಿ |

ದಿನಾಂಕಃ 14-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನನಗೆ ಚಾಸಾ-1 ಮತ್ತು 14 ಗೊತ್ತು. ನನಗೆ ತಾರೀಕು 26-02-2022 ರಂದು ಪಡುಬಿದ್ರೆ ಠಾಣೆಗೆ ಮದ್ಯಾಹ್ನದ 1.30 ಗಂಟೆಯ ಸಮಯಕ್ಕೆ ಕರೆಸಿದ್ದರು. ನಾನು ಹೋದಾಗ ಅಲ್ಲಿ ಚಾಸಾ-1 ಮತ್ತು 14 ಇದ್ದರು. ಆದಿನ ಚಾಸಾ-1 ಇವರು, ಪೊಲೀಸರ ಮುಂದೆ ಮೊಬೈಲ್ ನ್ನು ಹಾಜರುಪಡಿಸಿದ್ದರು. ಹಿಂದಿನ ದಿನ ಆರೋಪಿ, ಚಾಸಾ-1 ಇವರಿಗೆ ಹಲ್ಲೆ ಮಾಡಿದಾಗ, ಚಾಸಾ-1 ಇವರ ಮೊಬೈಲ್ ನ್ನು ರಸ್ತೆಯ ಮೇಲೆ ಒಡೆದು ಹಾಕಿದ್ದು, ಅದಕ್ಕಾಗಿ ಅದನ್ನು ಪೊಲೀಸರ ಮುಂದೆ ಹಾಜರುಪಡಿಸಿದ್ದರು. ಆಗ ಪೊಲೀಸರು ಅದನ್ನು ಸೀಜ್ ಮಾಡಿ, ನಮ್ಮ ಸಹಿ ಪಡೆದಿದ್ದರು. ಆಗ ಬರೆದ ಮಹಜರು ಈಗಾಗಲೇ ನಿಪಿ-4 ಆಗಿದ್ದು, ಅದರಲ್ಲಿಯ ನನ್ನ ಸಹಿ ಈಗಾಗಲೇ ನಿಶಾನೆ ಪಿ-4(ಸಿ) ಎಂದು ಗುರುತಿಸಿದೆ. ಆಗ ತೆಗೆದಿದ್ದ ಪೋಟೋಗಳು ನಿಶಾನೆ ಪಿ-5 ಆಗಿದೆ. ಹಾಜರುಪಡಿಸಿದ ಮೊಬೈಲ್ ನ ಪೋಟೋ ನಿಪಿ-6. ಸದರಿ ಮೊಬೈಲ್ ನ್ನು ಈಗ ನೋಡಿ ಗುರುತಿಸಿದ್ದು, ಅದು ಈಗಾಗಲೇ ಎಂಓ-1 ಆಗಿದೆ. ಎಂಓ-1 ರ ಪ್ಯಾಕ್ ಮೇಲೆ ನನ್ನ ಸಹಿ ಇದೆ. ಆದಿನ ಮಹಜರನ್ನು 1.30 ಗಂಟೆಯವರೆಗೆ ಮಾಡಿದ್ದರು.

**<u>ಪಾಟೀಸವಾಲು: ಆರೋಪಿ ಪರವಾಗಿ: ಶ್ರೀ ಟಿ.ವಿ.ಕೆ.ಎಸ್. ವಕೀಲರಿಂದ</u>**

1) ನಾನು ಸಹಿ ಮಾಡಿದಾಗ ಬೇರೆ ಯಾರು ಸಹಿ ಮಾಡಿದ್ದರು ಎಂದು ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ಓದಿದ್ದೇನೆ. ನಾನು ಹೋಗುವ ಮೊದಲೇ ಚಾಸಾ-1 ಮತ್ತು 14 ಬಂದಿದ್ದರು. ನಾನು ಹೋದ ನಂತರವೇ ನಿಪಿ-4 ನ್ನು ಬರೆದಿದ್ದರು. ಟೈಪಿಂಗ್ ಮುಗಿದಾಗ ಸುಮಾರು 1.30 ರಿಂದ 2.00 ಗಂಟೆ ಇರಬಹುದು. ಆದಿನ ಠಾಣೆಗೆ ನನ್ನನ್ನು ಎಸ್.ಐ ಕರೆಸಿದ್ದರು. ನನ್ನನ್ನು ಬೇರೆ ಕೇಸಿನಲ್ಲಿ ಕರೆಸಿಲ್ಲ.

2) ನಾನು ಸುಮಾರು 25 ವರ್ಷಗಳಿಂದ ನ್ಯಾಯಾಲಯಕ್ಕೆ ಬರುತ್ತಿದ್ದೇನೆ. ನನ್ನ ಜಮೀನು ನಾಗಾರ್ಜುನ ಇಂಡಸ್ಟ್ರಿಗ್ ಹೋಗಿದ್ದರಿಂದ, ಅದಕ್ಕಾಗಿ ಬರುತ್ತಿದ್ದೆ. ನಾನು ಠಾಣೆಯಿಂದ ಹೊರಡುವಾಗ ಚಾಸಾ-1 ಮತ್ತು 14 ಇದ್ದರು. ನಿಪಿ-4 ನ್ನು ಅಲ್ಲಿಯ ಸಿಬ್ಬಂದಿ ಟೈಪ್ ಮಾಡಿದ್ದರು. ಅವರ ಹೆಸರು ಗೊತ್ತಿಲ್ಲ. ಗಂಡಸರೊಬ್ಬರು ಅದನ್ನು ಟೈಪ್ ಮಾಡಿದ್ದರು. ನಾನು ಕೋರ್ಟಿಗೆ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1, ನನಗೆ ಬೇಕಾದವರಾಗಿದ್ದು, ಅವರಿಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

-ಮರುವಿಚಾರಣೆ ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.